# ಗೀತೆ ಮತ್ತು ಸಾಂಖ್ಯ

**ಸ್ವಾಮಿ ಕರುಣಾಕರಾನಂದ**

ಶ್ರೀಮದ್ಭಗವದ್ಗೀತೆಯಲ್ಲಿ ಸಾಂಖ್ಯವೆಂಬ ಶಬ್ದ ಹಲವು ಬಾರಿ ಉಲ್ಲೇಖಗೊಂಡಿದೆ. ಆದರೆ ಅದಕ್ಕೂ ಸಾಂಖ್ಯದರ್ಶನವೆಂದು ಪ್ರಸಿದ್ಧವಾದ ದರ್ಶನಶಾಸ್ತ್ರಕ್ಕೂ ಸಂಬಂಧವಿದೆಯೇ ಎಂಬುದು ಅತ್ಯಂತ ಜಟಿಲವಾದ ಪ್ರಶ್ನೆ. ಈ ಕುರಿತು ಬರೆದಿರುವ ಲೇಖಕರು ಸಂಸ್ಕೃತ ಹಾಗೂ ವೇದಾಂತ ಶಾಸ್ತ್ರಗಳನ್ನು ವಿಶೇಷವಾಗಿ ಅಧ್ಯಯನ ಮಾಡಿದ್ದಾರೆ. ಪ್ರಸ್ತುತ ಅವರು ಬೇಲೂರು ಮಠದಲ್ಲಿರುವ ಬ್ರಹ್ಮಚಾರಿ ಪ್ರಶಿಕ್ಷಣ ಕೇಂದ್ರದಲ್ಲಿ ಆಚಾರ್ಯ ರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಉತ್ತಮ ವಾಗ್ಮಿ ಹಾಗೂ ಬರಹಗಾರರು; ಅವರ ಅನೇಕ ಬರಹಗಳು 'ವಿವೇಕಪ್ರಭ'ದಲ್ಲಿ ಪ್ರಕಟವಾಗಿವೆ.

## ಗೀತೆಯಲ್ಲಿ ಬರುವ 'ಸಾಂಖ್ಯ' ಶಬ್ದ

ಭಗವದ್ಗೀತೆಯು ಆರಂಭವಾಗುವುದು ಅರ್ಜುನನ ಶೋಕ ಮೋಹಗಳ ನಿವಾರಣೆಗಾಗಿ. ಆ ಶೋಕಮೋಹಗಳನ್ನು ನಿವಾರಿಸಲು ಭಗವಂತನು ಅರ್ಜುನನಿಗೆ ಸಾಂಖ್ಯಯೋಗವನ್ನು ಉಪದೇಶಿಸಿದನು. ಆತ್ಮದ ಸ್ವರೂಪವನ್ನು ವಿವರಿಸುತ್ತ, ಯಾವ ಬಗೆಯ ವಿಕಾರವೂ ಆತ್ಮವಸ್ತುವಿನದ್ದಲ್ಲ, ಪ್ರಕೃತಿಯದ್ದು ಎಂದು ತಿಳಿಹೇಳುತ್ತಾನೆ. ಇಲ್ಲಿ ಉಪಯೋಗಿಸಿರುವ 'ಸಾಂಖ್ಯ' ಶಬ್ದವು ಸಾಂಪ್ರದಾಯಿಕ ಸಾಂಖ್ಯಶಾಸ್ತ್ರವೆಂದೇ ಕೆಲವು ಪಂಡಿತರು ಅಭಿಪ್ರಾಯಪಡುತ್ತಾರೆ. ಶಾಂಕರ ಸಿದ್ಧಾಂತದಲ್ಲಿ ಇದು ಸಾಂಪ್ರದಾಯಿಕ ಕಾಪಿಲ (ಕಪಿಲ ಮುನಿಗಳಿಂದ ಬೋಧಿಸಲ್ಪಟ್ಟ) ಸಾಂಖ್ಯವಲ್ಲ, ವೇದಾಂತವೇ ಎಂದು ನಿರೂಪಿಸಲ್ಪಟ್ಟಿದೆ. ಇಡೀ ಭಗವದ್ಗೀತೆಯನ್ನು ಪರಿಶೀಲಿಸಿದರೆ, ಸಾಂಖ್ಯರ ಗುಣಸಿದ್ಧಾಂತ, ಪ್ರಕೃತಿ ನಿರೂಪಣೆ, ಕ್ಷೇತ್ರ-ಕ್ಷೇತ್ರಜ್ಞವೆಂಬ ವಿಭಾಗ — ಇವುಗಳೂ ಚರ್ಚಿಸಲ್ಪಟ್ಟಿವೆ. ಅದರ ಜೊತೆಯಲ್ಲಿ ಯೋಗದ ಪ್ರಕ್ರಿಯೆಗಳೂ ಚರ್ಚಿಸಲ್ಪಟ್ಟಿವೆ; ಯಾವುದು ಸಾಂಖ್ಯವೋ ಯಾವುದು ಯೋಗವೋ ಅವೆರಡೂ ಒಂದೇ ಎಂದು *(೫.೪,೫)* ಗೀತೆ ಘೋಷಿಸುತ್ತದೆ. ಸಂಪ್ರದಾಯದಲ್ಲಿ ಅವೆರಡನ್ನೂ ಅವಳಿ-ಜವಳಿ ಎಂದೇ ಪರಿಗಣಿಸಲಾಗಿರುವುದರಿಂದ, ಗೀತೆಯ ಈ ಘೋಷಣೆ ಸಾಂಪ್ರದಾಯಿಕ ಸಾಂಖ್ಯಶಾಸ್ತ್ರಜ್ಞರ ವಾದಕ್ಕೆ ಪುಷ್ಟಿ ನೀಡುತ್ತದೆ. ಹಾಗಾದರೆ ಆತ್ಯಂತಿಕ ದುಃಖನಾಶಕ್ಕೆ ಗೀತೆಯು ಸತ್ಯವಾಗಿಯೂ ಸಾಂಪ್ರದಾಯಿಕ ಸಾಂಖ್ಯಯೋಗವನ್ನೇ ಕುರಿತು ಪರಿಹಾರವಾಗಿ ನೀಡಿದೆಯೋ, ಅಥವಾ ಇನ್ನಾವುದನ್ನೋ, ಅನ್ನುವುದನ್ನು ತಿಳಿಯಬೇಕಾದರೆ ಸಾಂಪ್ರದಾಯಿಕ ಸಾಂಖ್ಯಶಾಸ್ತ್ರ ಏನು ಹೇಳುತ್ತದೆ ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು.



## ಸಾಂಪ್ರದಾಯಿಕ ಸಾಂಖ್ಯಶಾಸ್ತ್ರದ (Classical Sankhya) ಸಿದ್ಧಾಂತಗಳು

ಮೂರು ಬಗೆಯ ದುಃಖಗಳಿಂದ ಆತ್ಯಂತಿಕ ಪರಿಹಾರ ಸಿಗಬೇಕಾದರೆ ಪ್ರಕೃತಿಯ ಕಾರ್ಯಗಳ, ಮೂಲಪ್ರಕೃತಿಯ ಹಾಗೂ ಪುರುಷನ ಸರಿಯಾದ ವಿವೇಕಜ್ಞಾನ (**ವ್ಯಕ್ತಾವ್ಯಕ್ತಜ್ಞ ವಿಜ್ಞಾನಾತ್**- *ಸಾಂಖ್ಯ ಕಾರಿಕಾ-೨* )ವುಂಟಾಗಬೇಕು. ಪ್ರಕೃತಿಯ ಕಾರ್ಯಗಳೆಂದರೆ ಮಹತ್, ಅಹಂಕಾರ, ಪಂಚ ತನ್ಮಾತ್ರ (ಶಬ್ದತನ್ಮಾತ್ರ, ಸ್ಪರ್ಶತನ್ಮಾತ್ರ, ರೂಪತನ್ಮಾತ್ರ, ರಸತನ್ಮಾತ್ರ ಹಾಗೂ ಗಂಧತನ್ಮಾತ್ರ), ಹನ್ನೊಂದು ಇಂದ್ರಿಯಗಳು (ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು ಹಾಗೂ ಮನಸ್ಸು), ಪಂಚಮಹಾಭೂತಗಳು- ಈ ಇಪ್ಪತ್ತ ಮೂರು ತತ್ತ್ವಗಳು. ಮೂಲಪ್ರಕೃತಿಯೇ ಇಪ್ಪತ್ತನಾಲ್ಕನೆಯ ತತ್ತ್ವ ಮತ್ತು ಪುರುಷನೇ ಇಪ್ಪತ್ತೈದನೆಯವನು. ಈ ಇಪ್ಪತ್ತೈದು ತತ್ತ್ವಗಳ ಸರಿಯಾದ ಜ್ಞಾನವುಂಟಾದರೆ ಪುರುಷನು 'ವಿವೇಕಖ್ಯಾತಿ'ಯನ್ನು ಹೊಂದಿ ಮುಕ್ತನಾಗುತ್ತಾನೆ, ಪ್ರಕೃತಿಯ ಹಿಡಿತದಿಂದ ಬಿಡುಗಡೆ ಹೊಂದುತ್ತಾನೆ. ನಿಜವಾಗಿಯೂ ಪುರುಷನು ಶುದ್ಧನೂ, ಮುಕ್ತನೂ ಆಗಿದ್ದರೂ, ಪ್ರಕೃತಿಯ ಸಂಬಂಧದಿಂದ ಅವಿವೇಕವುಂಟಾಗಿ ಪುರುಷನು ಬದ್ಧನೆಂಬಂತೆ ಕಂಡುಬರುತ್ತಾನೆ. ನಿಜವಾಗಿಯೂ ಬಂಧ-ಮೋಕ್ಷಗಳೆರಡೂ ಪ್ರಕೃತಿಗೇ ಸೇರಿದ್ದು.

ಈಶ್ವರನ ಅಸ್ತಿತ್ವವನ್ನು ಸಾಂಪ್ರದಾಯಿಕ ಸಾಂಖ್ಯದಲ್ಲಿ ಸ್ವೀಕರಿಸುವುದಿಲ್ಲ. ಸಾಂಖ್ಯಸೂತ್ರದಲ್ಲಿ (೧-೯೨ ರಿಂದ ೯೭) '**ಈಶ್ವರಾಸಿದ್ಧೇಃ**' (ಈಶ್ವರನಿದ್ದಾನೆಂಬುದಕ್ಕೆ ಪ್ರಮಾಣವಿಲ್ಲದಿರುವುದರಿಂದಲೂ), '**ಮುಕ್ತಬದ್ಧಯೋರನ್ಯತರಾಭಾವಾನ್ನ ತತ್ಸಿದ್ಧಿಃ**' (ಅವನಲ್ಲಿ ಮುಕ್ತಿ ಬಂಧಗಳು ಎರಡೂ ಇಲ್ಲದಿರುವುದರಿಂದಲೂ),

‘**ಉಭಯಥಾಪ್ಯಸತ್ಕರತ್ವಮ್**’ (ಎರಡೂ ಬಗೆಯಿಂದ ಆತನಲ್ಲಿ ಸೃಷ್ಟಿಗೆ ಯೋಗ್ಯತೆಯುಂಟಾಗುವುದಿಲ್ಲವಾದ್ದರಿಂದಲೂ), ‘**ಮುಕ್ತಾತ್ಮನಃ ಪ್ರಶಂಸಾ ಉಪಾಸಾ ಸಿದ್ಧಸ್ಯ ವಾ**’ (ಶಾಸ್ತ್ರಗಳಲ್ಲಿ ಮುಕ್ತರನ್ನು ಹೊಗಳುವುದಕ್ಕಾಗಿಯೋ, ಉಪಾಸನೆ ಮಾಡುವುದಕ್ಕಾಗಿಯೋ ಈಶ್ವರರೆಂದು ಹೇಳಲಾಗಿದೆಯಾದ್ದರಿಂದಲೂ), ‘**ತತ್ಸನ್ನಿಧಾನಾದಧಿಷ್ಠಾತೃತ್ವಂ ಮಣಿವತ್**’ (ಕಬ್ಬಿಣವು ಚಲಿಸಲು ಅಯಸ್ಕಾಂತದ ಸಾನ್ನಿಧ್ಯವಷ್ಟೇ ಸಾಕಾಗುವಂತೆ, ಪ್ರಕೃತಿಯು ಸೃಷ್ಟಿಸಲು ಚೇತನನಾದ ಜೀವನ ಸಾನ್ನಿಧ್ಯವೊಂದೇ ಸಾಕಾಗುವುದರಿಂದಲೂ), ‘**ವಿಶೇಷಕಾರ್ಯೇಷ್ವಪಿ ಜೀವಾನಾಮ್**’ (ಶರೀರವೇ ಮುಂತಾದ ವಿಷಯಗಳಲ್ಲಿಯೂ ಜೀವರ ಸಾನ್ನಿಧ್ಯವೊಂದೇ ಕಂಡುಬಂದಿರುವುದರಿಂದಲೂ) ಈಶ್ವರನ ಆವಶ್ಯಕತೆಯಿಲ್ಲದ್ದರಿಂದಲೂ ಈಶ್ವರನಿಲ್ಲವೆಂದು ವಾದಿಸಲಾಗಿದೆ.

ಗೀತೆಯಲ್ಲಿ ಈಶ್ವರನೇ ಮುಖ್ಯ. ಮುಕ್ತಿಯ ಗುರಿಯಾಗಿಯೂ, ಭಕ್ತಿಗೆ ಆಧಾರವಾಗಿಯೂ, ಕರ್ಮಸಮರ್ಪಣೆಗೆ ಉದ್ದೇಶವಾಗಿಯೂ, ಮುಕ್ತಿಯನ್ನು ಅನುಗ್ರಹಿಸುವವನಾಗಿಯೂ ಈಶ್ವರನೇ ಗೀತೆಯ ಹೃದಯಪ್ರಾಯನು. ಹೀಗೆ ನೋಡಿದರೆ ಸಾಂಪ್ರದಾಯಿಕ ಸಾಂಖ್ಯಶಾಸ್ತ್ರವನ್ನೇ ಗೀತೆ ಪ್ರತಿಪಾದಿಸುತ್ತದೆಯೆಂಬುದು ಸರಿಹೋಗದು. ಹಾಗಾದರೆ ಸಾಂಖ್ಯದ, ಯೋಗದ ಅಂಶಗಳನ್ನು ಗೀತೆ ಹೇಳುತ್ತಿದೆಯಲ್ಲವೆ, ಅದಕ್ಕೇನು ಪರಿಹಾರ? ಇನ್ನೊಂದು ಸಾಂಖ್ಯವೇನಾದರೂ ಇರಬಹುದೆ? ಎಂಬ ಪ್ರಶ್ನೆಯೇಳುತ್ತದೆ. ಈ ಪ್ರಶ್ನೆಗೆ ಉತ್ತರ ಸಿಗಬೇಕಾದಲ್ಲಿ ನಾವು ಗೀತೆಯ ಮೂಲ ಸೆಲೆಯನ್ನು ಇನ್ನೊಮ್ಮೆ ಪರಿಶೀಲಿಸಬೇಕು. ಅದೇ ಮಹಾಭಾರತ. ಗೀತೆಯು ಯಾವ ಮಹಾಭಾರತದ ಅವಿಭಾಜ್ಯ ಅಂಗವೋ, ಅಂತಹ ಮಹಾಭಾರತದಲ್ಲಿ ವ್ಯಾಖ್ಯಾನಗೊಂಡ ಸಾಂಖ್ಯ-ಯೋಗ ಸಿದ್ಧಾಂತಗಳನ್ನು ಪರೀಕ್ಷಿಸಬೇಕು.

## ಮಹಾಭಾರತದಲ್ಲಿರುವ ಸಾಂಖ್ಯಶಾಸ್ತ್ರ

ಆದಿಪರ್ವದ ಸಂಭವಪರ್ವ (೭೫-೭) ದಲ್ಲಿ **ಸಹಸ್ರಸಂಖ್ಯಾನ್ ಸಂಭೂತಾನ್ ದಕ್ಷಪುತ್ರಾಂಶ್ಚ ನಾರದಃ । ಮೋಕ್ಷಮಧ್ಯಾಪಯಾಮಾಸ ಸಾಂಖ್ಯಜ್ಞಾನಮನುತ್ತಮಮ್ ॥** — ‘‘ನಾರದನು ದಕ್ಷನ ಸಾವಿರ ಪುತ್ರರಿಗೆ ಎಲ್ಲಕ್ಕೂ ಮಿಗಿಲಾದ ಮೋಕ್ಷಶಾಸ್ತ್ರವಾದ ಸಾಂಖ್ಯವನ್ನು ಉಪದೇಶಿಸಿದನು’’ ಎಂಬ ಉಲ್ಲೇಖವಿದೆ. ಸಭಾಪರ್ವದ ಲೋಕಪಾಲಸಭಾಖ್ಯಾನಪರ್ವದಲ್ಲಿ (೫-೭), ನಾರದರನ್ನು ‘‘**ಪ್ರತ್ಯಕ್ಷದರ್ಶೀ ಲೋಕಸ್ಯ ತಿರ್ಯಗೂರ್ಧ್ವಮಧಸ್ತಥಾ । ಸಾಂಖ್ಯಯೋಗವಿಭಾಗಜ್ಞೋ ನಿರ್ವಿವಿತ್ಸುಃ ಸುರಾಸುರಾನ್ ॥**’’-‘‘ಮೇಲಿನ-ಕೆಳಗಿನ ಸಕಲ ಲೋಕಗಳ, ಎಲ್ಲದರ ಕುರಿತಾದ ಪ್ರತ್ಯಕ್ಷಜ್ಞಾನವಿರುವ, ಸಾಂಖ್ಯ ಹಾಗೂ ಯೋಗಗಳನ್ನು ವಿಭಾಗಿಸಿ ಅರಿತುಕೊಂಡಿರುವ, ದೇವತೆ ಹಾಗೂ ಅಸುರರಲ್ಲಿಯೂ ವೈರಾಗ್ಯವನ್ನುಂಟು ಮಾಡಲಿಚ್ಛೆಯಿರುವ’’ ಎಂದು ಪರಿಚಯಿಸಲಾಗಿದೆ. ವನಪರ್ವದ ಅರಣ್ಯಪರ್ವದಲ್ಲಿ (೨-೧೫) ಶೌನಕರನ್ನು ಪರಿಚಯಿಸುತ್ತ ‘**ಯೋಗೇ ಸಾಂಖ್ಯೇ ಚ ಕುಶಲಃ**’ ಎಂಬ ವಿಶೇಷಣವನ್ನು ನೀಡಲಾಗಿದೆ. ಅರಣ್ಯಪರ್ವದಲ್ಲಿ (೩-೩೭), ಯುಧಿಷ್ಠಿರನು ಸೂರ್ಯನನ್ನು ಕುರಿತು, ‘‘**ತ್ವಂ ಗತಿಃ ಸರ್ವಸಾಂಖ್ಯಾನಾಂ ಯೋಗಿನಾಂ ತ್ವಂ ಪರಾಯಣಮ್ ।**’’ ಎಂದು ಪ್ರಾರ್ಥನೆ ಮಾಡಿದ್ದಾನೆ. ನೀನು ಎಲ್ಲ ಸಾಂಖ್ಯರ ಹಾಗೂ ಯೋಗಿಗಳ ಪರಮ ಗತಿ ಎಂದದರ ಅರ್ಥ. ವನಪರ್ವದ ಮಾರ್ಕಂಡೇಯಸಮಾಸ್ಯಾಪರ್ವದಲ್ಲಿ (೨೨೧-೨೧) ಅಗ್ನಿಯ ವಂಶವನ್ನು ಪರಿಚಯಿಸುತ್ತ ಕಪಿಲರನ್ನು ಮನುವಿನ ನಾಲ್ಕನೆಯ ಪುತ್ರನೂ ಅಗ್ನಿಯೂ ಎಂದು, ಸಾಂಖ್ಯಶಾಸ್ತ್ರದ ಪ್ರವರ್ತಕರೆಂದೂ ಕರೆಯಲಾಗಿದೆ- ‘**ಕಪಿಲಂ ಪರಮರ್ಷಿಂ ಚ ಯಂ ಪ್ರಾಹುರ್ಯತಯಃ ಸದಾ । ಅಗ್ನಿಃ ಸ ಕಪಿಲೋ ನಾಮ ಸಾಂಖ್ಯಯೋಗಪ್ರವರ್ತಕಃ ॥**’ ಶಾಂತಿಪರ್ವದ ರಾಜಧರ್ಮಾನುಶಾಸನ ಪರ್ವದಲ್ಲಿ (೪೭-೫೪), ಭೀಷ್ಮನು ಶರೀರತ್ಯಾಗ ಮಾಡುವಾಗ ಶ್ರೀಕೃಷ್ಣನನ್ನು ಹೀಗೆಂದು (ಭೀಷ್ಮಸ್ತವರಾಜ) ಪ್ರಾರ್ಥಿಸಿದ್ದಾನೆ ‘‘**ಯಂ ತ್ರಿಧಾತ್ಮಾನಮಾತ್ಮಸ್ಥಂ ವೃತಂ ಷೋಡಶಭಿರ್ಗುಣೈಃ । ಪ್ರಾಹುಃ ಸಪ್ತದಶಂ ಸಾಂಖ್ಯಾಸ್ತಸ್ಮೈ ಸಾಂಖ್ಯಾತ್ಮನೇ ನಮಃ ॥**’’ -‘‘ಯಾರು ಸತ್ವ, ರಜಸ್ಸು ತಮಸ್ಸುಗಳೆಂಬ ಮೂರು ಗುಣಗಳಿಂದ ಮೂರಾಗಿ ಕಂಡು ಬರುತ್ತಾನೋ, ಗುಣಗಳ ಹದಿನಾರು ವಿಕಾರಗಳಿಂದ ಆವೃತನಾಗಿದ್ದರೂ ಯಾರು ತನ್ನ ಸ್ವರೂಪದಲ್ಲಿಯೇ ನೆಲೆಗೊಂಡಿದ್ದಾನೋ, ಸಾಂಖ್ಯಮತದ ಅನುಯಾಯಿಗಳು ಯಾರನ್ನು ಹದಿನೇಳನೆಯ ಪುರುಷತತ್ತ್ವನೆಂದು ಕರೆಯುವರೋ, ಅಂತಹ ಸಾಂಖ್ಯರೂಪ ಪರಮಾತ್ಮನಿಗೆ ನಮಸ್ಕಾರ’’. ಶ್ರೀಕೃಷ್ಣನೂ ಭೀಷ್ಮನನ್ನುದ್ದೇಶಿಸಿ ಹೀಗೆ ಹೇಳುತ್ತಾನೆ: ‘‘**ಯೋಗೇ ಸಾಂಖ್ಯೇ ಚ ನಿಯತಾ ಯೇ ಚ ಧರ್ಮಾಃ ಸನಾತನಾಃ । ಚಾತುರ್ವರ್ಣ್ಯಸ್ಯ ಯಶ್ಚೋಕ್ತೋ ಧರ್ಮೋ ನ ಸ್ಮ ವಿರುಧ್ಯತೇ ॥ ಸೇವ್ಯಮಾನಃ ಸವ್ಯೈಯಾಖ್ಯೋ ಗಾಂಗೇಯ ವಿದಿತಸ್ತವ ।**’’- ‘‘ಹೇ ಗಂಗಾಪುತ್ರನೆ! ಯೋಗ ಹಾಗೂ ಸಾಂಖ್ಯದಲ್ಲಿ ಯಾವ ಸನಾತನ ಧರ್ಮವಿದೆಯೊ, ಚಾತುರ್ವರ್ಣ್ಯಕ್ಕೆ ಯಾವ ಶಾಸ್ತ್ರವಿಹಿತವಾದ ಧರ್ಮವು ವಿಧಿಸಲ್ಪಟ್ಟಿವೆಯೊ, ಯಾವ ಧರ್ಮವನ್ನು ಎಲ್ಲರೂ ಸೇವಿಸುವರೊ, ಅವೆಲ್ಲವೂ ನಿನಗೆ ವ್ಯಾಖ್ಯಸಹಿತವಾಗಿ ತಿಳಿದಿದೆ.’’

ಶಾಂತಿಪರ್ವದ ಮೋಕ್ಷಧರ್ಮಪರ್ವದಲ್ಲಿ (೧೯೬.೭-೮) ‘‘**ಸಾಂಖ್ಯಯೋಗೌ ತು ಯಾವುಕ್ತೌ ಮುನಿಭಿರ್ಮೋಕ್ಷದರ್ಶಿಭಿಃ । ಸಂನ್ಯಾಸ ಏವ ವೇದಾಂತೇ ವರ್ತತೇ ಜಪನಂ ಪ್ರತಿ ॥**’’ —‘‘ಮೋಕ್ಷಶಾಸ್ತ್ರಜ್ಞರಾದ ಮುನಿಗಳು ಯಾವ ಸಾಂಖ್ಯ ಮತ್ತು ಯೋಗಗಳನ್ನು ಕುರಿತು ವಿವರಿಸಿದ್ದಾರೊ, ಅವುಗಳಲ್ಲಿ ವೇದಾಂತ (ಅಂದರೆ ಇಲ್ಲಿ ಸಾಂಖ್ಯ)ದಲ್ಲಿ ಜಪವನ್ನು ಸಂನ್ಯಾಸ ಮಾಡಬೇಕೆಂದು ಹೇಳಲಾಗಿದೆ’’, ‘‘ **ಸಾಂಖ್ಯಯೋಗೌ ತು ಯಾವುಕ್ತೌ ಮುನಿಭಿರ್ಮೋಕ್ಷದರ್ಶಿಭಿಃ ॥ ಮಾರ್ಗೌ ತಾವಪ್ಯುಭಾವೇತೌ ಸಂಶ್ರಿತೌ ನ ಚ ಸಂಶ್ರಿತೌ ।**’’ – ‘‘ಸಮದರ್ಶಿಗಳಾದ ಋಷಿಗಳು ಯಾವ ಸಾಂಖ್ಯ ಹಾಗೂ ಯೋಗಗಳನ್ನು ಪ್ರತಿಪಾದಿಸಿದ್ದಾರೊ,

ಅವೆರಡರಲ್ಲಿಯೂ ಚಿತ್ತಶುದ್ಧಿಯನ್ನುಂಟು ಮಾಡಿ ಜ್ಞಾನಪ್ರಾಪ್ತಿಗೆ ಅನುಕೂಲ ಮಾಡಿಕೊಡುವುದರಿಂದ ಜಪವನ್ನು ಆಶ್ರಯಿಸಲೂ ಬಹುದು, ಆಶ್ರಯಿಸದೆಯೂ ಇರಬಹುದೆಂದು ವಿಕಲ್ಪವನ್ನು ಕೊಟ್ಟಿದ್ದಾರೆ''. ಶಾಂತಿಪರ್ವದ, ಮೋಕ್ಷಧರ್ಮಪರ್ವದಲ್ಲಿ *(೨೧೮-೬,೭,೧೦)* ಸಾಂಖ್ಯರ ಪ್ರಸಿದ್ಧ ಆಚಾರ್ಯರಾದ ಪಂಚಶಿಖರನ್ನು ಹೀಗೆ ಪರಿಚಯಿಸಲಾಗಿದೆ — **''ತತ್ರ ಪಂಚಶಿಖೋ ನಾಮ ಕಾಪಿಲೇಯೋ ಮಹಾಮುನಿಃ । ಪರಿಧಾವನ್ ಮಹೀಂ ಕೃತ್ಸ್ನಾಂ ಜಗಾಮ ಮಿಥಿಲಾಮಥ ॥''** — ''ಒಂದು ಬಾರಿ ಕಪಿಲೆಯ ಮಗನಾದ ಪಂಚಶಿಖನು ಇಡೀ ಪೃಥ್ವಿಯನ್ನು ಪರಿಕ್ರಮ ಮಾಡುತ್ತ ಮಿಥಿಲೆಗೆ ಬಂದನು''. **''ಸರ್ವಸಂನ್ಯಾಸಧರ್ಮಾಣಾಂ ತತ್ತ್ವಜ್ಞಾನವಿನಿಶ್ಚಯೇ । ಸುಪರ್ಯವಸಿತಾರ್ಥಶ್ಚ ನಿರ್ದ್ವಂದ್ವೋ ನಷ್ಟಸಂಶಯಃ ॥''**– ''ಅವನು ಸರ್ವಸಂನ್ಯಾಸ ಧರ್ಮವನ್ನು ಅರಿತವನೂ, ತತ್ತ್ವಜ್ಞಾನದ ನಿರ್ಣಯದಲ್ಲಿ ಸುನಿಶ್ಚಿತವಾದ ಸಿದ್ಧಾಂತವನ್ನು ಪೋಷಿಸುವವನೂ ಆಗಿದ್ದನು. ಎಲ್ಲ ಸಂಶಯಗಳಿಂದ, ಎಲ್ಲ ದ್ವಂದ್ವಗಳಿಂದ ಪಾರಾಗಿದ್ದನು.'' **ಯಮಾಹುಃ ಕಪಿಲಂ ಸಾಂಖ್ಯಾಃ ಪರಮರ್ಷಿಂ ಪ್ರಜಾಪತಿಮ್ । ಸ ಮನ್ಯೇ ತೇನ ರೂಪೇಣ ವಿಸ್ಮಾಪಯತಿ ಹಿ ಸ್ವಯಮ್ ॥''**– ''ಸಾಂಖ್ಯದ ವಿದ್ವಾಂಸರು ಅವನನ್ನು ಸಾಕ್ಷಾತ್ ಪ್ರಜಾಪತಿಯಾದ ಮಹರ್ಷಿ ಕಪಿಲನ ಸ್ವರೂಪವೆಂದೇ ಹೇಳುತ್ತಾರೆ. ಅವನು ಸಾಂಖ್ಯಶಾಸ್ತ್ರದ ಪ್ರವರ್ತಕನಾದ ಕಪಿಲನೇ ಸ್ವಯಂ ಬಂದಿರುವನೊ ಎಂಬಂತೆ ಜನರನ್ನು ಆಶ್ಚರ್ಯಗೊಳಿಸುವನು''.

**ಆಸುರೇಃ ಪ್ರಥಮಂ ಶಿಷ್ಯಂ ಯಮಾಹುಶ್ಚಿರಜೀವಿನಮ್ । ಪಂಚಸ್ರೋತಸಿ ಯಃ ಸತ್ರಮಾಸ್ತೇ ವರ್ಷಸಹಸ್ರಿಕಮ್ ॥''** — ''ಆಸುರಿ ಮುನಿಯ ಪ್ರಥಮ ಶಿಷ್ಯನಾದ ಪಂಚಶಿಖನನ್ನು ಚಿರಂಜೀವಿಯೆಂದೇ ಹೇಳಲಾಗುತ್ತದೆ. ಅವನು ಒಂದು ಸಾವಿರ ವರ್ಷಗಳವರೆಗೂ ಮಾನಸ ಯಜ್ಞವನ್ನು ಮಾಡಿದನು.'' ರಾಜಾ ಜನಕನು ಪಂಚಶಿಖನ ಅಧ್ಯಾತ್ಮಜ್ಞಾನವನ್ನು ಕಂಡು ಅವನೆಡೆಗೆ ಆಕೃಷ್ಟನಾಗಿ ತನ್ನ ನೂರು ಜನ ಆಚಾರ್ಯರನ್ನು ಬಿಟ್ಟು ಪಂಚಶಿಖನ ಶಿಷ್ಯನಾದನು. ಪಂಚಶಿಖನು ಜನಕನಿಗೆ ಜಾತಿನಿರ್ವೇದ, ಕರ್ಮನಿರ್ವೇದ ಹಾಗೂ ಸರ್ವನಿರ್ವೇದಗಳನ್ನು ಬೋಧಿಸಿದನು. ಜನ್ಮದಲ್ಲಿ ಇರತಕ್ಕ ಕಷ್ಟವನ್ನು ವಿಚಾರ ಮಾಡಿ ಶರೀರದ ವಿಷಯದಲ್ಲಿ ವೈರಾಗ್ಯ ಹೊಂದುವುದೇ ಜಾತಿನಿರ್ವೇದ. ಕರ್ಮದಿಂದಾಗಿ ಅನೇಕ ಜನ್ಮಗಳ ಪ್ರಾಪ್ತಿ, ನರಕಾದಿ ಯಾತನೆಗಳನ್ನು ವಿಚಾರ ಮಾಡಿ ಪಾಪಕರ್ಮ ಹಾಗೂ ಕಾಮ್ಯಕರ್ಮಗಳಲ್ಲಿ ವೈರಾಗ್ಯ ಹೊಂದುವುದೇ ಕರ್ಮನಿರ್ವೇದ. ಈ ಜಗತ್ತಿನ ಸಣ್ಣ-ಪುಟ್ಟ ವಿಷಯಗಳಿಂದ ಹಿಡಿದು ಬ್ರಹ್ಮಲೋಕದ ಭೋಗಗಳವರೆಗೂ ಅವುಗಳ ಕ್ಷಣಿಕತೆ ಹಾಗೂ ದುಃಖಸ್ವರೂಪವನ್ನು ವಿಚಾರ ಮಾಡಿ ಎಲ್ಲದರಿಂದಲೂ ವೈರಾಗ್ಯ ಹೊಂದುವುದೇ ಸರ್ವನಿರ್ವೇದ. ಶಾಂತಿಪರ್ವದ ಮೋಕ್ಷಧರ್ಮಪರ್ವದಲ್ಲಿ *(ಅಧ್ಯಾಯ ೨೭೫-೩೯)* **''ಪುಣ್ಯಪಾಪಕ್ಷಯಾರ್ಥಂ ಹಿ ಸಾಂಖ್ಯಜ್ಞಾನಂ ವಿಧೀಯತೇ। ತತ್ಕ್ಷಯೇ ಹ್ಯಸ್ಯ ಪಶ್ಯನ್ತಿ ಬ್ರಹ್ಮಭಾವೇ ಪರಾಂ ಗತಿಮ್ ॥''** – ''ಪುಣ್ಯ ಹಾಗೂ ಪಾಪಗಳ ನಾಶಕ್ಕಾಗಿಯೇ ಸಾಂಖ್ಯಜ್ಞಾನವನ್ನು ವಿಧಿಸಲಾಗಿದೆ. ಅವುಗಳ ಕ್ಷಯವಾಗಿ ಯಾವಾಗ ಜೀವಾತ್ಮನಿಗೆ ಬ್ರಹ್ಮಭಾವವು ಪ್ರಾಪ್ತವಾಗುವುದೊ, ಆ ಸ್ಥಿತಿಯನ್ನೇ ಜ್ಞಾನಿಗಳು ಪರಮಗತಿಯೆನ್ನುವರು'' ಎನ್ನಲಾಗಿದೆ.

## ಮೋಕ್ಷಧರ್ಮಪರ್ವದಲ್ಲಿ ಸಾಂಖ್ಯದ ಪ್ರತಿಪಾದನೆ

ಶಾಂತಿಪರ್ವದ ೩೦೧ನೆ ಅಧ್ಯಾಯದಲ್ಲಿ ಭೀಷ್ಮನು ಯುಧಿಷ್ಠಿರನಿಗೆ ಸಾಂಖ್ಯದ ರೀತಿಯಲ್ಲಿ ಸಾಧನೆಯನ್ನೂ, ಫಲವನ್ನೂ ಕುರಿತು ಉಪದೇಶ ಮಾಡಿದ್ದಾನೆ. ಉಚ್ಚ-ನೀಚ ಎಲ್ಲ ಲೋಕಗಳಲ್ಲಿರುವ ದುರ್ಲಭವಾದ ವಸ್ತುಗಳ ದೋಷಗಳನ್ನು ಕುರಿತು ತಿಳಿದುಕೊಳ್ಳಬೇಕು. ಸಂಸಾರದಲ್ಲಿ ಮನುಷ್ಯನ ಆಯುಸ್ಸೆಷ್ಟೆಂಬುದನ್ನೂ, ಸುಖದ ಪರಮತತ್ತ್ವದ ಸರಿಯಾದ ಜ್ಞಾನವನ್ನೂ ಪಡೆದುಕೊಳ್ಳಬೇಕು. ವಿಷಯಭೋಗಿ ಮನುಷ್ಯನಿಗೆ ಕಾಲಕಾಲಕ್ಕುಂಟಾಗುವ ದುಃಖ, ತಿರ್ಯಗ್ಯೋನಿಗಳಲ್ಲಿ ನರಕದಲ್ಲಾಗುವ ದುಃಖಗಳನ್ನು ಕುರಿತು ಅರಿತುಕೊಳ್ಳಬೇಕು. ಸ್ವರ್ಗದಲ್ಲಿರುವ ದೋಷಗಳನ್ನೂ, ವೇದದಲ್ಲಿರುವ ಕಾಮ್ಯಕರ್ಮಗಳಲ್ಲಿರುವ ಗುಣ ಹಾಗೂ ದೋಷಗಳನ್ನು ಕುರಿತು ತಿಳಿದುಕೊಳ್ಳಬೇಕು. ಜ್ಞಾನಯೋಗ, ಯೋಗ ಹಾಗೂ ಸಾಂಖ್ಯಜ್ಞಾನಗಳ ಗುಣ-ದೋಷಗಳನ್ನು ಕುರಿತು ಅರಿಯಬೇಕು. ಸತ್ವಗುಣದ ಹತ್ತು ಗುಣಗಳ (ಜ್ಞಾನಶಕ್ತಿ, ವೈರಾಗ್ಯ, ಸ್ವಾಭಿಮಾನ, ತಪಸ್ಸು, ಸತ್ತ್ವ, ಕ್ಷಮೆ, ಧೈರ್ಯ, ಸ್ವಚ್ಛತೆ, ಆತ್ಮಜ್ಞಾನ ಹಾಗೂ ಅಧಿಷ್ಠಾತೃತ್ವ), ರಜೋಗುಣದ ಒಂಬತ್ತು ಗುಣಗಳ (ಅಸಂತೋಷ, ಪಶ್ಚಾತ್ತಾಪ, ಶೋಕ, ಲೋಭ, ಅಕ್ಷಮೆ, ಇನ್ನೊಬ್ಬರನ್ನು ತುಳಿಯುವ ಪ್ರವೃತ್ತಿ, ಕಾಮ, ಕ್ರೋಧ ಹಾಗೂ ಈರ್ಷ್ಯೆ), ತಮೋಗುಣದ ಎಂಟು ಗುಣಗಳ (ಅವಿವೇಕ, ಮೋಹ, ಪ್ರಮಾದ, ಸ್ವಪ್ನ, ನಿದ್ರೆ, ಅಭಿಮಾನ, ವಿಷಾದ ಹಾಗೂ ಪ್ರೀತಿಯ ಅಭಾವ), ಬುದ್ಧಿಯ ಏಳು ಗುಣಗಳ (ಮಹತ್, ಅಹಂಕಾರ, ಶಬ್ದತನ್ಮಾತ್ರಾ, ಸ್ಪರ್ಶತನ್ಮಾತ್ರಾ, ರೂಪತನ್ಮಾತ್ರಾ, ರಸತನ್ಮಾತ್ರಾ ಮತ್ತು ಗಂಧತನ್ಮಾತ್ರಾ), ಮನಸ್ಸಿನ ಆರು ಗುಣಗಳ (ಶ್ರೋತ್ರ, ತ್ವಕ್, ನೇತ್ರ, ರಸನಾ, ಘ್ರಾಣ ಮತ್ತು ಮನಸ್ಸು), ಆಕಾಶದ ಐದು ಗುಣಗಳ (ಆಕಾಶ, ವಾಯು, ಅಗ್ನಿ, ಜಲ ಮತ್ತು ಪೃಥ್ವೀ) ಜ್ಞಾನವನ್ನು ಸಂಪಾದಿಸಬೇಕು. ಹಾಗೆಯೇ, ಬುದ್ಧಿಯ ಬೇರೆ ನಾಲ್ಕುಗುಣಗಳ (ಸಂಶಯ, ನಿಶ್ಚಯ, ಗರ್ವ ಮತ್ತು ಸ್ಮರಣ), ತಮೋಗುಣದ ಬೇರೆ ಮೂರುಗುಣಗಳ (ಅಜ್ಞಾನ, ಸಂಶಯ ಮತ್ತು ತಪ್ಪು ತಿಳುವಳಿಕೆ), ರಜೋಗುಣದ ಇನ್ನೆರಡು (ಪ್ರವೃತ್ತಿ ಮತ್ತು ದುಃಖ) ಹಾಗೂ ಸತ್ತ್ವಗುಣದ ಇನ್ನೊಂದು ಗುಣದ(ಪ್ರಕಾಶ) ಜ್ಞಾನವನ್ನೂ ಗಳಿಸಬೇಕು. ಆತ್ಮಪ್ರಾಪ್ತಿಯ ಮಾರ್ಗಗಳಾದ ಪ್ರಾಕೃತ ಪ್ರಲಯ ಮತ್ತು ಆತ್ಮವಿಚಾರಗಳನ್ನೂ ಸರಿಯಾಗಿ ಅರಿಯಬೇಕು. ಹೀಗೆ ಅರಿತವನು ಜ್ಞಾನ-ವಿಜ್ಞಾನಗಳಿಂದ ಕೂಡಿ, ಮೋಕ್ಷವನ್ನುಂಟು ಮಾಡುವ ಸಾಧನಗಳ ಅನುಷ್ಠಾನದಿಂದ

ಶುದ್ಧಚಿತ್ತನಾದ ಸಾಂಖ್ಯಯೋಗಿಯು ಶುಭವಾದ ಮೋಕ್ಷವನ್ನು ಪಡೆಯುವನು.

ಬುದ್ಧಿಯ ಆಶ್ರಯಗುಣ ತಮೋಗುಣ, ತಮೋಗುಣದ ಆಶ್ರಯಗುಣ ರಜೋಗುಣ, ರಜೋಗುಣದ ಆಶ್ರಯಗುಣ ಸತ್ವಗುಣ, ಸತ್ವಗುಣದ ಆಶ್ರಯನು ಜೀವಾತ್ಮನು, ಜೀವಾತ್ಮನ ಆಶ್ರಯನು ದೇವನಾದ **ನಾರಾಯಣನು**, ನಾರಾಯಣನ ಆಶ್ರಯವೇ **ಬ್ರಹ್ಮತತ್ತ್ವವು. ಬ್ರಹ್ಮತತ್ತ್ವಕ್ಕೆ ಯಾವುದೇ ಆಶ್ರಯ**ವಿಲ್ಲ (ದಪ್ಪಕ್ಷರಗಳಲ್ಲಿರುವುದನ್ನು ಗಮನಿಸುವುದು — ಈಶ್ವರಕೃಷ್ಣರು ರಚಿಸಿದ ಸಾಂಖ್ಯಕಾರಿಕೆಗಳಲ್ಲಿ ಇವುಗಳಿಲ್ಲ). ಸಾವಿರಾರು ಜನರಲ್ಲಿ ಯಾರೋ ಒಬ್ಬನಿಗೆ ಮೋಕ್ಷದಲ್ಲಿ ಮನಸ್ಸುಂಟಾಗುತ್ತದೆ. ಮಹರ್ಷಿ ಕಪಿಲರು ಸಾಂಖ್ಯರ ಮತದಂತೆ, ಎಲ್ಲ ಶರೀರಧಾರಿಗಳಲ್ಲಿ ಕಾಮ, ಕ್ರೋಧ, ಭಯ, ನಿದ್ರೆ ಹಾಗೂ ಶ್ವಾಸಗಳೇ ಐದು ದೋಷಗಳೆಂದೂ ಹೇಳುವರು. ಸತ್ಪುರುಷರು ಕ್ಷಮೆಯಿಂದ ಕ್ರೋಧವನ್ನೂ, ಸಂಕಲ್ಪದ ತ್ಯಾಗದಿಂದ ಕಾಮವನ್ನೂ, ಸತ್ವಗುಣವನ್ನು ಸೇವಿಸುವುದರಿಂದ ನಿದ್ರೆಯನ್ನೂ, ಪ್ರಮಾದವನ್ನು ತ್ಯಜಿಸುವುದರಿಂದ ಭಯವನ್ನೂ ಹಾಗೇ ಅಲ್ಪಾಹಾರದ ಸೇವನೆಯಿಂದ ಶ್ವಾಸವೆಂಬ ದೋಷವನ್ನೂ ಜಯಿಸುತ್ತಾರೆ. ಸಾಂಖ್ಯಜ್ಞರಾದ ಮಹಾಜ್ಞಾನಿಗಳು ನೂರಾರು ಗುಣಗಳಿಂದ ಗುಣಗಳನ್ನು, ನೂರಾರು ದೋಷಗಳಿಂದ ದೋಷಗಳನ್ನು, ನೂರಾರು ಹೇತುಗಳಿಂದ ಹೇತುಗಳನ್ನು ತತ್ತ್ವತಃ ಅರಿತುಕೊಂಡು, ಆ ಜ್ಞಾನದ ಪ್ರಭಾವದಿಂದ ಸಂಸಾರದಲ್ಲಿ ನಿಸ್ಸಾರತೆಯನ್ನು, ಪರಾಧೀನತೆಯನ್ನೂ, ದುಃಖವನ್ನೂ, ನಷ್ಟಪ್ರಾಯತೆಯನ್ನು ಕಂಡು ತಮ್ಮ ತಪೋರೂಪದ ದಂಡದಿಂದ, ವಿವೇಕವೆಂಬ ಶಸ್ತ್ರದಿಂದ ಆಸಕ್ತಿಯನ್ನು ಕತ್ತರಿಸುವನು. ನಂತರ ಆ ಸಾಂಖ್ಯಯೋಗಿಯನ್ನು **ಸೂರ್ಯನು ತನ್ನ ರಶ್ಮಿಯಿಂದ ಅರ್ಚಿರಾದಿ ಮಾರ್ಗದಿಂದ ಬ್ರಹ್ಮಲೋಕಕ್ಕೆ** ತೆಗೆದುಕೊಂಡು ಹೋಗುವ ಮಾರ್ಗದಲ್ಲಿ ಮೇಲಿನ ಲೋಕಗಳಿಗೆ ಒಯ್ಯುತ್ತಾನೆ. ಅ ಯೋಗಿಯನ್ನು ಪ್ರವಹ ವಾಯುವಿನ ಅಭಿಮಾನಿ ದೇವತೆಯು ಸೂರ್ಯನಿಂದ ತೆಗೆದುಕೊಂಡು ಆಕಾಶದ ಪರಮ ಗತಿಗೆ ಒಯ್ಯುತ್ತಾನೆ. ಆಕಾಶಾಭಿಮಾನಿ ದೇವತೆಯು ಆ ಯೋಗಿಯನ್ನು ತೇಜೋಮಯ ವಿದ್ಯುತ್ ಅಭಿಮಾನಿ ದೇವತೆಯ ಬಳಿ ಕರೆದೊಯ್ಯುತ್ತಾನೆ. ವಿದ್ಯುದಭಿಮಾನಿ ದೇವತೆಯು ಅವನನ್ನು ಅಪಮಗತಿಯಾದ ಶ್ರೀನಾರಾಯಣನ ಪಾರ್ಷದರು ಇರುವಲ್ಲಿಗೆ ಕರೆದೊಯ್ಯುತ್ತಾನೆ. ನಾರಾಯಣನ ಪಾರ್ಷದರು ಆ ಯೋಗಿಯನ್ನು ಶ್ರೀಮನ್ನಾರಾಯಣನಲ್ಲಿಗೆ ಒಯ್ಯುತ್ತಾರೆ. ಸತ್ತ್ವಗುಣಯುಕ್ತನಾದ ಶ್ರೀಮನ್ನಾರಾಯಣನು ಆ ಸಾಂಖ್ಯಯೋಗಿಯನ್ನು ಪರಬ್ರಹ್ಮ ಪರಮಾತ್ಮನಲ್ಲಿ ಸೇರಿಸುತ್ತಾನೆ. ಪರಮಾತ್ಮನನ್ನು ಪಡೆದ ಸಾಂಖ್ಯಯೋಗಿಗಳು ಅವನ ರೂಪವನ್ನು ಹೊಂದಿ ಅಮೃತತ್ತ್ವವನ್ನು ಹೊಂದಿದವರಾಗಿ ಮತ್ತೆ ಹಿಂತಿರುಗುವುದಿಲ್ಲ. ಯಾರು ಎಲ್ಲ ಬಗೆಯ ದ್ವಂದ್ವಗಳಿಂದ ಪಾರಾಗಿ, ಸತ್ಯವಂತರೂ, ಒಳಗೂ ಹೊರಗೂ ಒಂದೇ ಆಗಿರುವ, ಎಲ್ಲ ಭೂತಗಳ ಮೇಲೆ ದಯೆಯನ್ನು ತೋರುವ ಮಹಾತ್ಮರಿರುವರೋ, ಅವರಿಗೇ ಈ ಪರಮ ಗತಿಯುಂಟಾಗುತ್ತದೆ. ಇನ್ನು ಯಾರು ಸಾಂಖ್ಯಮಾರ್ಗಿಗಳಾಗಿ ಸಿದ್ಧಿಯನ್ನು ಪಡೆಯುವುದಿಲ್ಲವೊ, ಅವರು ದೇವತೆಗಳ ಲೋಕಗಳನ್ನು ಪಡೆಯುತ್ತಾರೆ.

ಪರಬ್ರಹ್ಮ ಪರಮಾತ್ಮನು ಸಾತ್ತ್ವಿಕ, ರಾಜಸ ಹಾಗೂ ತಾಮಸ ಗುಣಗಳನ್ನು ಹಾಗೂ ಬುದ್ಧಿ, ಮನಸ್ಸು, ಆಕಾಶ, ವಾಯು, ತೇಜಸ್ಸು, ಜಲ ಮತ್ತು ಪೃಥ್ವೀ-ಇವೆಲ್ಲದರ ಗುಣಗಳನ್ನು ಮತ್ತು ಇನ್ನೆಲ್ಲ ಪದಾರ್ಥಗಳನ್ನು ತನ್ನ ಗುಣಗಳಿಂದ ವ್ಯಾಪಿಸಿ ಎಲ್ಲ ಕ್ಷೇತ್ರಜ್ಞ(ಜೀವ)ರಲ್ಲಿ ನೆಲೆಸಿದ್ದಾನೆ. ಗುರುವಿನ ಹಿಂದೆ ಶಿಷ್ಯನು ಬರುವಂತೆ ಮನಸ್ಸು, ಇಂದ್ರಿಯಗಳು ಹಾಗೂ ಶುಭಾಶುಭ ಕರ್ಮಗಳು ಜೀವನ ಹಿಂದೆ ಹಿಂದೆ ಹೋಗುತ್ತವೆ. ಜೀವಾತ್ಮನು ಯಾವಾಗ ಇಂದ್ರಿಯ ಹಾಗೂ ಪ್ರಕೃತಿಯನ್ನೂ ಲಂಘಿಸಿ ಮೇಲೇರುವನೊ, ಆಗ ದ್ವಂದ್ವರಹಿತನಾದ, ಮಾಯೆಗೆ ಅತೀತನಾದ **ನಾರಾಯಣಸ್ವರೂಪನಾದ ಪರಮಾತ್ಮನನ್ನು** ಪಡೆದುಕೊಳ್ಳುತ್ತಾನೆ. ಆ ನಿರ್ಗುಣನಾದ, ನಿರ್ವಿಕಾರನಾದ (ಅನಾಮಯಮ್, ಅಗುಣಮ್) ನಾರಾಯಣನನ್ನು ಪಡೆದ ಸಾಂಖ್ಯಯೋಗಿಗಳು ಪಾಪ-ಪುಣ್ಯಗಳಿಂದ ಮುಕ್ತರಾಗಿ ಪುನಃ ಸಂಸಾರಕ್ಕೆ ಹಿಂದಿರುಗುವುದಿಲ್ಲ. ಸಾಂಖ್ಯಜ್ಞಾನವನ್ನು ಉತ್ಕೃಷ್ಟಜ್ಞಾನವೆಂದು ಹೇಳುವರು. ಅಕ್ಷರವೂ, ಧ್ರುವವೂ ಆದ ಸನಾತನ ಪೂರ್ಣ ಬ್ರಹ್ಮವನ್ನು ಇದು ಪ್ರತಿಪಾದಿಸುತ್ತದೆ. ಈ ಜ್ಞಾನಕ್ಕೆ ಸರಿಸಾಟಿಯಾದದ್ದು ಇನ್ನೊಂದಿಲ್ಲ. ಆ ಬ್ರಹ್ಮವು ಆದಿ, ಮಧ್ಯ, ಅಂತ್ಯಗಳಿಲ್ಲದ, ದ್ವಂದ್ವರಹಿತವಾದ, ಜಗತ್ತಿನ ಉತ್ಪತ್ತಿಗೆ ಕಾರಣವೂ, ಶಾಶ್ವತವೂ, ಕೂಟಸ್ಥವೂ, ನಿತ್ಯವೂ ಆಗಿದೆಯೆಂದು ಜ್ಞಾನಿಗಳು ಹೇಳುವರು. ಸಾಂಖ್ಯವು ಅಮೂರ್ತವಾದ ಬ್ರಹ್ಮದ ವ್ಯಕ್ತರೂಪವೆಂದು ಪ್ರಸಿದ್ಧವಾಗಿದೆ. ಈ ಪುರಾತನವಾದ ವಿಶ್ವದ ರೂಪದಿಂದ ಸಾಕ್ಷಾತ್ ಭಗವಾನ್ ನಾರಾಯಣನೇ ಎಲ್ಲೆಲ್ಲೂ ವಿರಾಜಿಸುತ್ತಿದ್ದಾನೆ. ಸೃಷ್ಟಿ ಕಾಲದಲ್ಲಿ ಆತ ಜಗತ್ತಿನ ಸೃಷ್ಟಿ ಹಾಗೂ ಸಂಹಾರ ಕಾಲದಲ್ಲಿ ತನ್ನಲ್ಲೇ ಜಗತ್ತನ್ನು ಲೀನಗೊಳಿಸುತ್ತಾನೆ. ಹೀಗೆ ಜಗತ್ತನ್ನು ತನ್ನ ಶರೀರದೊಳಗೆ ಸ್ಥಾಪಿಸಿಕೊಂಡು ಜಗತ್ತಿನ ಅಂತರಾತ್ಮನಾದ ಭಗವಾನ್ ನಾರಾಯಣ ಎಲ್ಲೆಲ್ಲೂ ವ್ಯಾಪ್ಯವಾಗಿರುವ ಕಾರಣ ಸಲಿಲದ ಮೇಲೆ ಮಲಗುತ್ತಾನೆ.

ಶಾಂತಿಪರ್ವದ ೩೧೮ನೆ ಅಧ್ಯಾಯದ ೭೮-೭೯ ಶ್ಲೋಕಗಳಲ್ಲಿ ಸ್ಪಷ್ಟವಾಗಿ ಹೇಳಿದೆ; ''**ಅನ್ಯಶ್ಚ ರಾಜನ್ನವರಸ್ತಥಾನ್ಯಃ ಪಂಚವಿಂಶಕಃ । ತತ್ಸ್ಥಾನಾಚ್ಚಾನುಪಶ್ಯಂತಿ ಏಕ ಏವ ಇತಿ ಸಾಧವಃ॥**'', ''**ತೇ ನೈತನ್ನಾಭಿನಂದಂತಿ ಪಂಚವಿಂಶಕಮಚ್ಯುತಮ್ । ಜನ್ಮಮೃತ್ಯುಭಯಾದ್ ಭೀತಾ ಯೋಗಾಃ ಸಾಂಖ್ಯಾಶ್ಚ ಕಾಶ್ಯಪ ॥**''- ''ರಾಜನ್! ಪರಮಾತ್ಮ ಬೇರೆ ಮತ್ತು ಜೀವಾತ್ಮ ಬೇರೆ ಏಕೆಂದರೆ ಪರಮಾತ್ಮನು ಜೀವಾತ್ಮನಿಗೆ ಆಶ್ರಯನಾಗಿದ್ದಾನೆ; ಆದರೆ ಜ್ಞಾನಿಗಳಾದ ಸಂತರು ಇವೆರಡನ್ನೂ ಒಂದೇ

ಎಂಬುದಾಗಿ ಕಾಣುತ್ತಾರೆ'', ''ಕಶ್ಯಪನಂದನ! ಸಾಂಖ್ಯ ಸಾಧಕರು ಮತ್ತು ಯೋಗಸಾಧಕರು ಜನ್ಮ-ಮರಣಗಳಿಗೆ ಹೆದರಿದವರಾಗಿ ಭಗವತ್ಪರಾಯಣರಾಗಿ ಇಪ್ಪತ್ತಾರನೆಯ ತತ್ತ್ವವಾದ ಪರಮಾತ್ಮನ ದರ್ಶನವನ್ನು ಮಾಡುತ್ತ ಜೀವಾತ್ಮ ಹಾಗೂ ಪರಮಾತ್ಮರನ್ನು ಒಂದೆಂದೇ ಭಾವಿಸುತ್ತಾರೆ ಮತ್ತು ಅಭೇದ ದರ್ಶನವನ್ನು ಅಭಿನಂದಿಸುತ್ತಾರೆ''. ಶಾಂತಿಪರ್ವದ ೨೧೯ನೆ ಅಧ್ಯಾಯದಲ್ಲಿ ಪಂಚಶಿಖನು ಜನಕನಿಗೆ ಎಲ್ಲ ದುಃಖಗಳನ್ನು ನಾಶ ಮಾಡುವ ಸಾಂಖ್ಯಶಾಸ್ತ್ರವನ್ನು ಉಪದೇಶಿಸುತ್ತ ಹೇಳುತ್ತಾನೆ, ''**ತ್ಯಾಗ ಏವ ಹಿ ಸರ್ವೇಷಾಂ ಯುಕ್ತಾನಾಮಪಿ ಕರ್ಮಣಾಮ್ । ನಿತ್ಯಂ ಮಿಥ್ಯಾವಿನೀತಾನಾಂ ಕ್ಲೇಶೋ ದುಃಖವಹೋ ಮತಃ ॥**'' —''ಮುಕ್ತಿಗಾಗಿ ಯಾರು ಪ್ರಯತ್ನಿಸುತ್ತಿರುವರೊ, ಅವರೆಲ್ಲರೂ ತಮ್ಮ ತಮ್ಮ ಕರ್ಮಗಳಲ್ಲಿ ಅಹಂಕಾರ-ಮಮಕಾರಗಳನ್ನು, ಆಸಕ್ತಿಯನ್ನು, ಕಾಮನೆಯನ್ನೂ ಬಿಡಬೇಕು. ಇವುಗಳನ್ನು ಬಿಡದೆಯೆ ಯಾರು ತನ್ನಲ್ಲಿ ವಿನಯ (ವಿನಯವೆಂದರೆ- ಶಮ, ದಮ ಮುಂತಾದ ಸಾಧನೆ)ವಿರುವುದೆಂದು ಸುಳ್ಳು ಸುಳ್ಳಾಗಿಯೆ ಅಂದುಕೊಳ್ಳುವನೊ, ಅವನಲ್ಲಿ ಅವಿದ್ಯೆಯೇ ಮುಂತಾದ ದುಃಖವನ್ನುಂಟು ಮಾಡುವ ಕ್ಲೇಶವುಂಟಾಗುತ್ತದೆ.'' ''ನದಿ-ನದಗಳು ಸಮುದ್ರವನ್ನು ಸೇರಿ ಹೇಗೆ ತಮ್ಮ ಹೆಸರುಗಳನ್ನೂ, ವ್ಯಕ್ತಿತ್ವವನ್ನೂ ಕಳೆದುಕೊಳ್ಳುವುವೊ, ಹಾಗೆಯೇ ಜೀವನು ಪರಮಾತ್ಮನನ್ನು ಸೇರುತ್ತವೆ. ಇದಕ್ಕೇ ಮೋಕ್ಷವೆನ್ನುತ್ತಾರೆ.''

## ಭಗವದ್ಗೀತೆಯಲ್ಲಿ ಸಾಂಖ್ಯ

ಅರ್ಜುನನ ಶೋಕ-ಮೋಹಗಳನ್ನು ಕಳೆಯಲು ಭಗವಂತನಾದ ಶ್ರೀಕೃಷ್ಣನು ಆತ್ಮದ ತತ್ತ್ವವನ್ನು ಅವನಿಗೆ ಉಪದೇಶಿಸುತ್ತ ಅದರ ಅಮರಣಧರ್ಮವನ್ನು ೨ನೆ ಅಧ್ಯಾಯದಲ್ಲಿ ಹೇಳಿದನು. ೫ನೆ ಅಧ್ಯಾಯದಲ್ಲಿ ಜ್ಞಾನದ ಆವಶ್ಯಕತೆಯನ್ನು ಹೇಳುತ್ತ ''**ಜ್ಞಾನೇನ ತು ತದಜ್ಞಾನಂ ಯೇಷಾಂ ನಾಶಿತಮಾತ್ಮನಃ । ತೇಷಾಮಾದಿತ್ಯವಜ್ಜ್ಞಾನಂ ಪ್ರಕಾಶಯತಿ ತತ್ಪರಮ್ ॥**'' —''ಯಾರಲ್ಲಿಯಾದರೂ ಆತ್ಮಜ್ಞಾನದಿಂದ ಅಜ್ಞಾನವು ನಷ್ಟವಾಗಿದೆಯೊ, ಅವರಿಗೆ ಸೂರ್ಯನಂತೆ ಜ್ಞಾನವು ಪರಮಾತ್ಮನನ್ನು ಬೆಳಗುವುದು''. ೭ನೆ ಅಧ್ಯಾಯದಲ್ಲಿ ಅಪರಾಪ್ರಕೃತಿ ಮತ್ತು ಪರಾಪ್ರಕೃತಿಯನ್ನು ಹೇಳುತ್ತಾನೆ. ''**ಭೂಮಿರಾಪೋಽನಲೋ ವಾಯುಃ ಖಂ ಮನೋ ಬುದ್ಧಿರೇವ ಚ । ಅಹಂಕಾರ ಇತೀಯಂ ಮೇ ಭಿನ್ನಾ ಪ್ರಕೃತಿರಷ್ಟಧಾ ॥**''-''ನನ್ನ ಪ್ರಕೃತಿಯು ಪೃಥ್ವೀ, ಜಲ, ಅಗ್ನಿ, ವಾಯು, ಆಕಾಶ, ಮನಸ್ಸು, ಬುದ್ಧಿ, ಅಹಂಕಾರಗಳೆಂದು ಎಂಟು ಬಗೆಯಾಗಿ ವಿಂಗಡಿಸಲ್ಪಟ್ಟಿದೆ''. ''**ಅಪರೇಯಮಿತಸ್ತ್ವನ್ಯಾಂ ಪ್ರಕೃತಿಂ ವಿದ್ಧಿ ಮೇ ಪರಾಮ್ । ಜೀವಭೂತಾಂ ಮಹಾಬಾಹೋ ಯಯೇದಂ ಧಾರ್ಯತೇ ಜಗತ್ ॥**''-''ಇವಿಷ್ಟು ನನ್ನ ಕೀಳ್ತರದ ಪ್ರಕೃತಿ. ಇದಕ್ಕಿಂತಲೂ ಬೇರೆಯಾಗಿ, ಉತ್ಕೃಷ್ಟವಾದದ್ದು ಯಾವುದರಿಂದ ಈ ಜಗತ್ತು ಧರಿಸಲ್ಪಟ್ಟಿದೆಯೋ ಅಂತಹ ಜೀವವೆಂಬ ನನ್ನ ಪ್ರಕೃತಿಯೆಂದು ತಿಳಿ''. ''**ಏತದ್ಯೋನೀನಿ ಭೂತಾನಿ ಸರ್ವಾಣೀತ್ಯುಪಧಾರಯ । ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ ॥**''-''ಎಲ್ಲ ಭೂತಗಳೂ ಈ ಎರಡೂ ಕಾರಣಗಳಿಂದಲೇ ಉತ್ಪನ್ನಗೊಂಡಿವೆಯೆಂದು ತಿಳಿ. ಹಾಗೆಯೇ, ಇಡೀ ಜಗತ್ತಿನ ಉತ್ಪತ್ತಿ ಹಾಗೂ ಲಯಸ್ಥಾನ ನಾನೇ''. ೮ನೆ ಅಧ್ಯಾಯದಲ್ಲಿ ಧೂಮಾದಿ ಮಾರ್ಗ ಹಾಗೂ ಅರ್ಚಿರಾದಿ ಮಾರ್ಗಗಳನ್ನು ಹೇಳಿದ್ದಾನೆ. ಶರೀರ ತ್ಯಜಿಸಿದ ಕರ್ಮಿಗಳು ಧೂಮಾದಿ ಮಾರ್ಗದಿಂದ ಚಂದ್ರಮಂಡಲಕ್ಕೆ ಹೋಗುತ್ತಾರೆ; ಯೋಗಿಗಳು ಅರ್ಚಿರಾದಿ ಮಾರ್ಗದಿಂದ ಬ್ರಹ್ಮವನ್ನು ಸೇರುವರು. ಧೂಮಾದಿ ಮಾರ್ಗದಿಂದ ಹೋದವರು ಸಂಸಾರಕ್ಕೆ ಹಿಂದಿರುಗುವರು; ಅರ್ಚಿರಾದಿ ಮಾರ್ಗದಿಂದ ಹೋಗಿ ಬ್ರಹ್ಮವನ್ನು ಸೇರಿದವರು ಮತ್ತೆ ಸಂಸಾರಕ್ಕೆ ಹಿಂದಿರುಗುವುದಿಲ್ಲ.

೧೩ನೆಯ ಅಧ್ಯಾಯದಲ್ಲಿ ಪ್ರಕೃತಿಯನ್ನು ಕ್ಷೇತ್ರವೆಂದೂ, ಜೀವನನ್ನು ಕ್ಷೇತ್ರಜ್ಞನೆಂದೂ ತಿಳಿಸುತ್ತ, ಪರಮಾತ್ಮನೇ ನಿಜವಾಗಿ ಕ್ಷೇತ್ರಜ್ಞನು ಅಥವಾ ಜೀವನು ಎಂದು ಹೇಳಲಾಗಿದೆ. ನಿಜವಾದ ಜ್ಞಾನಕ್ಕಾಗಿ ಅಮಾನಿತ್ವವೇ ಮೊದಲಾದ ಗುಣಗಳನ್ನು ಜೀವನದಲ್ಲಿ ಅಳವಡಿಸಬೇಕೆಂದು ಹೇಳಲಾಗಿದೆ. ಪರಬ್ರಹ್ಮದ ಸ್ವರೂಪವನ್ನು, ಪರಮಾರ್ಥತತ್ತ್ವವನ್ನೂ ಹೇಳುತ್ತ ಭಗವಂತನು ಹೇಳುತ್ತಾನೆ — ''ಎಲ್ಲೆಲ್ಲೂ ಕೈಕಾಲುಗಳನ್ನು, ಎಲ್ಲೆಲ್ಲೂ ಕಣ್ಣು ತಲೆ ಬಾಯಿಗಳನ್ನು ಹೊಂದಿದ್ದು, ಎಲ್ಲೆಲ್ಲೂ ಕಿವಿಗಳನ್ನು ಹೊಂದಿದ್ದು ಎಲ್ಲೆಡೆಯೂ ವ್ಯಾಪಿಸಿಕೊಂಡಿದೆ'', ''ಎಲ್ಲ ಇಂದ್ರಿಯಗಳೂ ಇವನ ಶಕ್ತಿಯಿಂದಲೇ ತಮ್ಮ ತಮ್ಮ ಕಾರ್ಯ ನಿರ್ವಹಿಸುತ್ತವೆ; ಆದರೂ ಈತನಿಗೆ ಯಾವ ಇಂದ್ರಿಯಗಳೂ ಇಲ್ಲ. ಎಲ್ಲಕ್ಕೂ ಆಧಾರನು ಇವನು; ಆದರೂ ಯಾವುದಕ್ಕೂ ಇವನು ಅಂಟಿಕೊಂಡಿಲ್ಲ. ಪ್ರಕೃತಿಯ ಗುಣಗಳನ್ನು ಅನುಭವಿಸುತ್ತಿದ್ದರೂ, ತಾನು ಮಾತ್ರ ನಿರ್ಗುಣನಾಗಿಯೆ ಇರುವನು'', ''ಎಲ್ಲ ಭೂತಗಳ ಒಳಗೂ ಹೊರಗೂ ಇರುವವನೂ, ಅತ್ಯಂತ ಸೂಕ್ಷ್ಮನಾಗಿರುವುದರಿಂದ ಅರಿಯಲಸಾಧ್ಯನೂ ಆಗಿರುವನು. ಆತನೂ ಅಜ್ಞಾನಿಗಳಿಗೆ ದೂರನೂ, ಜ್ಞಾನಿಗಳಿಗೆ ಹತ್ತಿರವಾಗಿಯೂ ಇರುವನು'', ಬೇರೆ ಬೇರೆಯಾಗಿರುವ ಭೂತಗಳಲ್ಲಿ ಅವನೊಬ್ಬನೇ ಅವಿಭಕ್ತನಾಗಿರುವನು. ''ಪ್ರಕೃತಿಯಿಂದಲೇ ಎಲ್ಲ ಬಗೆಯಿಂದಲೂ ಎಲ್ಲ ಬಗೆಯ ಕರ್ಮಗಳು ಮಾಡಲ್ಪಡುತ್ತವೆ. ಹೀಗೆಂದು ಯಾರು ನೋಡುವನೋ, ಅವನೇ ಸರಿಯಾಗಿ ನೋಡುವವನು'', ''ಆದಿಯಿಲ್ಲದ ಪರಮಾತ್ಮನು ನಿರ್ಗುಣನಾದ್ದರಿಂದ ಅವ್ಯಯನಾಗಿದ್ದಾನೆ; ಹೇ ಕೌಂತೇಯ! ಈ ಶರೀರದಲ್ಲಿದ್ದರೂ, ಅವನು ಏನನ್ನೂ ಮಾಡನು, ಕರ್ಮಕ್ಕೆ ಅಂಟಿಕೊಳ್ಳುವುದೂ ಇಲ್ಲ'', ''ಕ್ಷೇತ್ರ ಹಾಗೂ ಕ್ಷೇತ್ರಜ್ಞರ ನಡುವಿನ ಅಂತರವನ್ನು, ಪ್ರಕೃತಿಯ ಹಿಡಿತದಿಂದ ಮುಕ್ತಿಯನ್ನೂ ಯಾರು ತಮ್ಮ ಜ್ಞಾನಚಕ್ಷುಸ್ಸಿನಿಂದ ಅರಿಯುವವರೊ, ಅವರು ಪರಮಾತ್ಮನನ್ನು ಪಡೆಯುವರು''.

೧೪ನೆಯ ಅಧ್ಯಾಯದಲ್ಲಿ ಗುಣಗಳ ವಿವರಗಳನ್ನು ನೀಡುತ್ತ, ಆ ಗುಣಗಳನ್ನು ಹೇಗೆ ಮೀರಿ ಹೋಗುವುದೆಂದು ವಿವರಿಸಿದ್ದಾನೆ. ೧೫ನೆಯ ಅಧ್ಯಾಯದಲ್ಲಿ ಸಂಸಾರವೃಕ್ಷವನ್ನು ತಿಳಿಸಿದ್ದಾನೆ. ೧೬ನೆಯ ಅಧ್ಯಾಯದಲ್ಲಿ ದೈವೀ ಹಾಗೂ ಆಸುರೀ ಗುಣಗಳನ್ನು ತಿಳಿಸುತ್ತ ದೈವೀ ಗುಣಗಳಿಂದ ಮೋಕ್ಷವೂ, ಆಸುರೀ ಗುಣಗಳಿಂದ ಬಂಧನವೂ ಉಂಟಾಗುತ್ತದೆ ಎಂದು ಹೇಳುತ್ತಾನೆ.

## ಭಗವದ್ಗೀತೆಯ ವೈಶಿಷ್ಟ್ಯ

ಭಗವದ್ಗೀತೆಯಲ್ಲಿ ಪ್ರಸ್ತಾಪಿಸಿರುವ ಸಾಂಖ್ಯವು ಅಥವಾ ವೇದಾಂತವು ಸಾಂಪ್ರದಾಯಿಕ ಸಾಂಖ್ಯಶಾಸ್ತ್ರಕ್ಕಿಂತ ಮಹಾಭಾರತದಲ್ಲಿ ಉಪದೇಶಿಸಿರುವ ಸಾಂಖ್ಯಕ್ಕೆ ಹೆಚ್ಚು ಹತ್ತಿರವಾಗಿದೆ. ಇಷ್ಟಾದರೂ, ಗೀತೆಯ ಉಪದೇಶವು ಸಂಪೂರ್ಣವಾಗಿ ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡಿದೆ. ನಾವಾಗಲೇ ತಿಳಿಸಿದಂತೆ, ಗೀತೆಯಲ್ಲಿ ಈಶ್ವರನೇ ಮುಖ್ಯ. ಗೀತೆಯಲ್ಲಿ ಬರುವ ನಾನು, ನನ್ನ, ನನ್ನನ್ನು –ಇವೇ ಮೊದಲಾದ ಈಶ್ವರನನ್ನು ಸೂಚಿಸುವ ಉತ್ತಮಪುರುಷ ಶಬ್ದಗಳು ಪದೇ ಪದೇ ಪ್ರಯೋಗಿಸಲ್ಪಟ್ಟಿವೆ. ಭಗವಂತನು ೭ನೆಯ ಅಧ್ಯಾಯದಲ್ಲಿ ಎರಡು ಬಗೆಯ ಪ್ರಕೃತಿಗಳನ್ನು ಹೇಳಿದ್ದರೂ ಅವೆರಡೂ ನನ್ನದೇ ಎಂದಿದ್ದಾನೆ. ತತ್ಕ್ಷಣ ಅಲ್ಲೇ ಹೇಳುತ್ತಾನೆ: ''**ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ । ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ॥**'' –''ಹೇ ಧನಂಜಯನೇ! ನನ್ನನ್ನು ಹೊರತುಪಡಿಸಿ ಇನ್ನೇನೂ ಇರುವುದಿಲ್ಲ. ಈ ಸಮಸ್ತ ಜಗತ್ತು ಮಣಿಗಳು ದಾರದಲ್ಲಿ ಹೆಣೆಯಲ್ಪಟ್ಟಂತೆ ನನ್ನಲ್ಲಿ ಹಿಡಿದಿಡಲ್ಪಟ್ಟಿವೆ''. ೧೩ನೆ ಅಧ್ಯಾಯದಲ್ಲಿ ಕ್ಷೇತ್ರಜ್ಞನನ್ನು ಹೇಳುತ್ತ, ''**ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ**'' –''ಜೀವನನ್ನು ನಾನೇ ಎಂದು ಅರಿ'' ಎಂದು ತತ್ತ್ವತಃ ಈಶ್ವರನಿಗೂ ಜೀವನಿಗೂ ಭೇದವಿಲ್ಲವೆಂದು ನಿರ್ಣಯಿಸಿದ್ದಾನೆ. ೪ನೆ ಅಧ್ಯಾಯದಲ್ಲಿ ಅವತಾರ ತತ್ತ್ವವನ್ನು ಹೇಳುತ್ತ, ಈಶ್ವರ ತತ್ತ್ವವನ್ನು ದೃಢಪಡಿಸುತ್ತ, ಕರ್ಮಯೋಗಕ್ಕೂ ಈಶ್ವರನಿಗೂ, ಭಕ್ತಿಯೋಗಕ್ಕೂ ಈಶ್ವರನಿಗೂ, ಧ್ಯಾನಯೋಗಕ್ಕೂ ಈಶ್ವರನಿಗೂ, ಜ್ಞಾನಯೋಗಕ್ಕೂ ಈಶ್ವರನಿಗೂ ಸಂಬಂಧವನ್ನು ಸ್ಥಾಪಿಸಿದ್ದಾನೆ. ಅಷ್ಟೇ ಅಲ್ಲದೆ, ಕರ್ಮಯೋಗಕ್ಕೂ ಜ್ಞಾನಯೋಗಕ್ಕೂ, ಕರ್ಮಯೋಗಕ್ಕೂ ಭಕ್ತಿಯೋಗಕ್ಕೂ, ಭಕ್ತಿಯೋಗಕ್ಕೂ ಜ್ಞಾನಯೋಗಕ್ಕೂ, ಧ್ಯಾನಯೋಗಕ್ಕೂ ಕರ್ಮಕ್ಕೂ, ಭಕ್ತಿಗೂ ಸಂಬಂಧವನ್ನು ಸ್ಥಾಪಿಸಿ ಪ್ರತಿಯೊಂದೂ ಇನ್ನೊಂದಕ್ಕೆ ಹೇಗೆ ಪೂರಕ–ಪ್ರೇರಕಗಳೆಂದು ತೋರಿಸಿಕೊಟ್ಟಿದ್ದಾನೆ. ಭಗವದ್ಗೀತೆಯ ಇಂತಹ ಯೋಗಸಮನ್ವಯ ಬೇರೆಲ್ಲೂ ಮಹಾಭಾರತದಲ್ಲಿ ನಮಗೆ ಸಿಗುವುದಿಲ್ಲ. ಇಂತಹ ಸುಂದರವಾದ ಯೋಗಗಳ ಸಾಮರಸ್ಯ ಸಂಬಂಧದಿಂದ ಯಾವುದೇ ಯೋಗವೂ ಪ್ರತ್ಯೇಕವೆಂದು ಎನಿಸುವುದಿಲ್ಲ; ಒಂದು ಯೋಗವು ಇನ್ನೊಂದಕ್ಕೆ ವಿರೋಧವೆಂದೇ ಎನಿಸದು. ಏಕೆಂದರೆ ''**ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ**''–''ಎಲ್ಲ ಬಗೆಯ ಧರ್ಮಗಳನ್ನೂ ಪರಿತ್ಯಜಿಸಿ ನನ್ನನ್ನೇ ಶರಣು ಹೊಂದು'' ಎಂದಿದ್ದಾನೆ. 'ಧರ್ಮ' ಶಬ್ದದಿಂದ ಯೋಗಗಳನ್ನೂ ಪರಿಗಣಿಸಿದರೆ ಎಲ್ಲ ಯೋಗಗಳನ್ನೂ ತಮ್ಮ ವ್ಯಕ್ತಿಗತ ಸ್ವರೂಪದಿಂದ ನೋಡದೆಯೆ ಈಶ್ವರನ ಸಾಕ್ಷಾತ್ಕಾರದ ಸಾಧನವೆಂದು ಬಗೆದು ಈಶ್ವರನೇ ತನ್ನಿಂದ ಪಡೆಯಬೇಕಾದ ಪರಮ ಗುರಿಯೆಂಬ ದೃಢವಾದ ಜ್ಞಾನವೇ ಈಶ್ವರನಿಗೆ ನಿಜವಾದ ಅರ್ಥದಲ್ಲಿ ಶರಣಾಗುವುದು. ಯಾವುದೇ ಯೋಗವಾಗಿರಲಿ, ಮುಖ್ಯವಾಗಿ ಬೇಕಾಗಿರುವುದು ಈ ಶ್ಲೋಕದಲ್ಲಿ ಹೇಳಿರುವಂತೆ ತತ್ತ್ವಪರಾಯಣತೆಯೊಂದೇ — ''**ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು । ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ ॥**''–''ನನ್ನಲ್ಲೇ ಮನಸ್ಸನ್ನಿಡು. ನನ್ನ ಭಕ್ತನಾಗು. ನನ್ನನ್ನೇ ಪೂಜಿಸು. ನನ್ನನ್ನೇ ನಮಸ್ಕರಿಸು. ನೀನು ನನಗೆ ಪ್ರಿಯನಾಗಿರುವೆಯಾದ್ದರಿಂದ ಪ್ರತಿಜ್ಞೆ ಮಾಡಿ ಹೇಳುತ್ತೇನೆ, ನನ್ನನ್ನೇ ಹೊಂದುವೆ. ಇದು ಸತ್ಯ''. ಒಂದು ಸುಂದರವಾದ ತೋಟ ಮಾಡಲು ಹಾರೆಯ ಅಗತ್ಯ ಎಷ್ಟಿದೆಯೊ, ಗುದ್ದಲಿ, ಕತ್ತರಿ, ಕುಡುಗೋಲು, ಉತ್ತಮ ಬೀಜಗಳ ಆವಶ್ಯಕತೆಯೂ ಅಷ್ಟೇ ಇದೆ. ತೋಟಗಾರಿಕೆಯ ಜ್ಞಾನ, ಗಿಡ–ಮರಗಳ ಮೇಲೆ ಪ್ರೀತಿ, ಕೆಲಸದಲ್ಲಿ ಏಕಾಗ್ರತೆ — ಎಲ್ಲವೂ ಬೇಕು. ಯಾವುದನ್ನು ಕಡೆಗಣಿಸಿದರೂ ತೋಟಗಾರಿಕೆ ಯಶಸ್ವಿಯಾಗದು.

ಜೀವನ ಸ್ವರೂಪವು ನಿಜವಾಗಿ ಎಲ್ಲೆಲ್ಲೂ ವ್ಯಾಪಿಸಿರುವುದು, ಅಸಂಗ, ಅಮರಣ, ಅವಿಕ್ರಿಯವಾದರೂ ಈ ಶರೀರವೆಂಬ ಪ್ರಕೃತಿಯ ಸಂಬಂಧದಿಂದ ಈ ಸತ್ಯವನ್ನು ಅರಿಯುವುದು ಬಹಳ ಕಷ್ಟ. ಆದ್ದರಿಂದ ಎಂದಿಗೂ ಸಂಸಾರಕ್ಕೆ ಸಿಲುಕದ, ಅಸಂಗವಾದ, ಸರ್ವಶಕ್ತನಾದ, ಸರ್ವವ್ಯಾಪಿಯಾದ, ಎಲ್ಲವನ್ನೂ ಬೆಳಗುವ ಈಶ್ವರನ ಅಥವಾ ಬ್ರಹ್ಮವೆಂಬ ತತ್ತ್ವದ ಅವಲಂಬನೆ ಬುದ್ಧಿಗೆ ಕೊಡದಿದ್ದಲ್ಲಿ ಸುಲಭವಾಗಿ ಸಾಧನೆಯಲ್ಲಿ ತೊಡಗಿಸಿಕೊಳ್ಳಲಾಗದು. ಸಂಸಾರವನ್ನು ಮೀರಬೇಕಾದರೆ, ಸಂಸಾರವನ್ನು ಅದಾಗಲೇ ಸ್ಪಷ್ಟವಾಗಿ ಮೀರಿ ನಿಂತಿರುವ ತತ್ತ್ವದ ಅವಲಂಬನೆ ಬೇಕೇ ಬೇಕು. ಅದೇ ಈಶ್ವರ. ಭಗವದ್ಗೀತೆಯಲ್ಲಿ ಭಗವಂತನು ಸಾಂಪ್ರದಾಯಿಕ ಸಾಂಖ್ಯಶಾಸ್ತ್ರದಲ್ಲಿಲ್ಲದ ಕೊರತೆಯನ್ನು ಪೂರೈಸಿ ಅಧ್ಯಾತ್ಮಶಾಸ್ತ್ರವನ್ನು ಎಲ್ಲರಿಗೂ ಎಟಕುವಂತೆ ಮಾಡಿದ್ದಾನೆ. ಅದೇ ಭಗವದ್ಗೀತೆಯ ವೈಶಿಷ್ಟ್ಯ.

ಈ ಬೆಳಕಿನಲ್ಲಿ ನೋಡಿದರೆ ತಿಳಿದುಬರುವುದೇನೆಂದರೆ, ಭಗವದ್ಗೀತೆಯಲ್ಲಿ ಯಾವುದೇ ಒಂದು ಯೋಗವನ್ನು ಹೋಳಾಗಿ ಅದರಿಂದ ಪ್ರತ್ಯೇಕಿಸಿ, ಅಳವಡಿಸಿಕೊಳ್ಳಲು ಬರುವುದಿಲ್ಲ. ಭಗವದ್ಗೀತೆಯನ್ನು ಸಮಗ್ರ–ಸಾಧನಾ ಕೈಪಿಡಿಯಂತೆಯೆ ಸ್ವೀಕರಿಸಬೇಕಾಗುವುದು.